ಸೂರ್ಯ ಮುಖ ಕೆಂಪೇರಿಸಿಕೊಂಡು ಅಲ್ಲಿಂದ ಕೋಣೆಗೆ ನಡೆದಿದ್ದ.

ಅಪೂರ್ವ ತಟ್ಟೆಯಲ್ಲಿ ಊಟ ಬಡಿಸಿಕೊಂಡು ಅವನ ಕೋಣೆಗೇ ಒಯ್ದು ಕೊಟ್ಟಳು.

'ಉಪವಾಸ ಮಾಡಿದ್ರೆ ನಿಮ್ಮ ಹೊಟ್ಟೆಗೇ ಇಲ್ಲ.. ಅಷ್ಟೇ.. ಬೆಳಗ್ಗಿನಿಂದ ಸಿಟ್ಟಿನಲ್ಲಿ ಏನೂ ತಿಂದಿರಲಿಕ್ಕಿಲ್ಲಂತ ಗೊತ್ತು ನನ್ಗೆ.. ಈಗ ಸುಮ್ನೆ ಊಟ ಮಾಡಿ' ಅಪೂರ್ವಳ ಅಧಿಕಾರಯುತ ದನಿಗೆ ಸೋತವನು ತಟ್ಟೆಗೆ ಕೈ ಹಾಕಿದ.

'ಅಲ್ಲಾ ಅಪೂರ್ವ', ಅವನೇನೋ ಹೇಳಲು ಹೊರಟಾಗ ಅಪೂರ್ವ ತಡೆದಳು.

'ಇವತ್ತು ಏನೂ ಮಾತನಾಡುವುದು ಬೇಡ.. ಯಾರ ಮನಸ್ಸೂ ಇವತ್ತು ಸರಿ ಇಲ್ಲ.. ನಾಳೆ ಬೆಳಿಗ್ಗೆ ಮಾತನಾಡೋಣ' ಎಂದಳು.

ಮರುದಿನ ಬೆಳಿಗ್ಗೆ ಅಪೂರ್ವ ಕೋಣೆಯಿಂದ ಹೊರ ಬಂದಾಗ, ವಿಜಯಮ್ಮ ಹಜಾರದಲ್ಲಿ ಸೋಫಾದ ಮೇಲೆ ಅಡ್ಡಾಗಿದ್ದವರು, ಅಪೂರ್ವಳನ್ನು ಕಾಣುತ್ತಲೇ ಎದ್ದು ಸರಿಯಾಗಿ ಕುಳಿತರು. ಅವರ ಕೆದರಿದ ಕೂದಲು, ಕೆಂಪೇರಿದ್ದ ಕಂಗಳು ರಾತ್ರಿಯಿಡೀ ಅವರು ನಿದ್ದೆ ಮಾಡಿಲ್ಲವೆಂದು ಸಾರಿ ಹೇಳುವಂತಿದ್ದವು.

'ಆಂಟಿ ಏನಾಯ್ತು? ಆರಾಮಾಗಿದ್ದೀರಾ ತಾನೆ?' ಎಂದು ಆತಂಕದಿಂದ ಅವರೆಡೆಗೆ ಧಾವಿಸಿದಳು.

'ನನ್ಗೇನೂ ಆಗಿಲ್ವೇ ಅಪೂರ್ವ... ನಿನ್ನೆ ಸಿಟ್ಟಿನ ಭರದಲ್ಲಿ, ಸೂರ್ಯಂಗೆ ಬಯ್ದು ಬಿಟ್ಟೆ.. ಆಮೇಲೆ ಅವ್ನ ಸ್ಥಿತೀಲಿ ನಿಂತು ಯೋಚಿಸಿದಾಗ ಅವ್ನು ಸರಿಯಿದ್ದ ಅಂತ ಅನ್ನಿಸ್ತು.. ನಿನ್ನ ಮಾತು ಅವ್ನು ಕೇಳ್ತಾನೆ.. ಹೇಗಾದ್ರೂ ಅವನನ್ನು ಸಮಾಧಾನಪಡಿಸು..ಮೊದಲಿನ ಥರ ಮಾಡ್ಬಿಡು.. ನಿನ್ನ ಉಪಕಾರ ಮರೆಯೋಲ್ಲ ನಾನು' ಎಂದು ಕೇಳಿಕೊಂಡರು.

ಪರೀಕ್ಷೆ ತೀರಾ ಸಮೀಪದಲ್ಲಿದ್ದರಿಂದ ಈ ಗೊಡವೆಗೆ ಹೋಗುವ ವ್ಯವಧಾನ ಅವಳಲ್ಲಿರದೇ ಹೋದರೂ ವಿಜಯಮ್ಮನಿಗೆ ಹಾಗೆ ನಿರಾಕರಿಸಲು ಅವಳಿಂದಾಗಲಿಲ್ಲ.

'ಸರಿ ಆಂಟಿ' ಎಂದು ಆಶ್ವಾಸನೆ ನೀಡಿದ ಬಳಿಕವಷ್ಟೇ ಅವರು ನಿರಾಳನಾಗಿ ಉಸಿರಾಡಿದ್ದು. ಅಪೂರ್ವಳನ್ನು ಕುಳ್ಳಿರಿಸಿ, ವಿಜಯಮ್ಮ ಇಂದು ಮುಕ್ತವಾಗಿ ಮನಬಿಚ್ಚಿ, ಹಿಂದಿನ ಘಟನೆಗಳನ್ನೆಲ್ಲಾ ವಿವರಿಸುತ್ತಾ, ರಾಯರಿಗೆ ಸೂರ್ಯನೆಂದರೆ ತುಂಬಾ ಅಭಿಮಾನವಿತ್ತೆಂದು ಸಮರ್ಥಿಸಿಕೊಂಡರು. ಅದನ್ನೆಲ್ಲಾ ಆಲಿಸುವಾಗ ಅಪೂರ್ವಳಿಗೂ ಅವರ ಮಾತಿನಲ್ಲಿ ಸತ್ಯಾಂಶವಿದೆಯೆಂಬುದನ್ನು ಮನಗಂಡಿದ್ದಳು.

### ದೇವಸ್ಥಾನದಲ್ಲಿ ಸೂರ್ಯ-ಅಪೂರ್ವ ಮಾತುಕತೆ

'ನಾವಿಬ್ರೂ ದೇವಸ್ಥಾನಕ್ಕೆ ಹೋಗಿ ಬರೋಣ. ನಿಮ್ಮ ಸಮಸ್ಯೆ ಏನೂಂತ ಅಲ್ಲಿ ಹೇಳಿ' ಎಂದು ಸೂರ್ಯನನ್ನು ಹೊರಡಿಸಿ, ರಿಕ್ಷಾ ಹಿಡಿದು ದೇವಸ್ಥಾನಕ್ಕೆ ಕರೆ ತಂದಿದ್ದಳು. ದೇವರಿಗೆ ಕೈ ಮುಗಿದು, ತೀರ್ಥ ಪ್ರಸಾದ ಸ್ವೀಕರಿಸಿ ಇಬ್ಬರು ಹೊರಗಿದ್ದ ವಸಂತ ಮಂಟಪದ ನೆರಳಿನಲ್ಲಿ ಕುಳಿತುಕೊಂಡರು. ವಿಶೇಷ ದಿನವಲ್ಲವಾದ್ದರಿಂದ ಜನರು ವಿರಳರಾಗಿದ್ದು ಮಾತನಾಡಲು ಏಕಾಂತ ಕಲ್ಪಿಸಿದಂತಾಗಿ, 'ಈಗ ಹೇಳಿ, ಏನು ನಿಮ್ಮ ಸಮಸ್ಯೆ?' ಅವನನ್ನೇ ದೀರ್ಘವಾಗಿ ನಿರುಕಿಸುತ್ತ ಪ್ರಶ್ನಿಸಿದಳು ಅಪೂರ್ವ.

ಅಣೆಕಟ್ಟಿನ ಬಾಗಿಲು ತೆರೆದಾಗ ರಭಸದಿಂದ ಹರಿದ ನೀರಿನಂತೆ ಒಂದೇ ಸಮನೇ ರಾಯರ ಬಗ್ಗೆ ತನ್ನ ಅಸಮಾಧಾನವನ್ನೆಲ್ಲ ಸೂರ್ಯ ಹೊರಗೆ ಕಕ್ಕಿದ. ಟೇಪ್ ರೆಕಾರ್ಡರ್‌ನಲ್ಲಿ ಹಾಕಿದ ಹಳೇ ಕ್ಯಾಸೆಟ್‌ನಿಂದ ಮತ್ತೆ ಅದೇ ರಾಗ, ಅದೇ ಹಾಡು! ತನ್ನನ್ನು ಕಂಡರೆ ಮುಂಚಿನಿಂದಲೂ ಆಗದು. ಇತ್ಯಾದಿ, ಇತ್ಯಾದಿ. ಅಪೂರ್ವ ಅದನ್ನೇ ಬಹಳಷ್ಟು ಬಾರಿ ಅವನ ಬಾಯಿಂದ ಆಲಿಸಿದ್ದಳು. ಅವನಲ್ಲಿ ಇಂಥ ಭಾವನೆ ಬಲವಾಗಿ ಬೇರೂರಿದ್ದು, ಅದನ್ನು ಕಿತ್ತೊಗೆಯುವ ಬಗೆ ಹೇಗೆಂದು ಯೋಚಿಸಿದಳು. ರಾಯರಿಗೆ ಇದು ಅಗ್ನಿಪರೀಕ್ಷೆ! ತಮ್ಮ ನಿಸ್ವಾರ್ಥ ಪ್ರೀತಿ, ಮಮತೆಯನ್ನು ನಿರೂಪಿಸಬೇಕಿತ್ತು. ಆ ಸ್ಥಿತಿಯಲ್ಲಿ ರಾಯರು ಇರಲಿಲ್ಲ. ಸೂರ್ಯನಿಗೆ ಒಳಗಣ್ಣು ತೆರೆದು ಅರ್ಥೈಸುವ ವಿವೇಚನೆ, ವ್ಯವಧಾನ ಎರಡೂ ಇರಲಿಲ್ಲ!

'ಹೆತ್ತವರಿಗೆ ದಂಡಿಸುವ ಹಕ್ಕು ಇರುತ್ತೆ ಸೂರ್ಯ'

'ಆದ್ರೆ ಹೀಗಾ..? ಇಷ್ಟು ವರ್ಷಗಳ ಬಳಿಕವೂ ಅದು ಹಸಿಯಾಗಿ ಉಳಿಸುವಷ್ಟು ಗಾಯ ನೀಡುವಂಥ ದಂಡನೆಯೇನು..?' ಎಂದ ಕಹಿಯಾಗಿ.

'ಒಬ್ಬೊಬ್ಬರು ತಂತಮ್ಮ ಪ್ರೀತಿಯನ್ನು ವ್ಯಕ್ತ ಪಡಿಸುವ ರೀತಿ ಒಂದೊಂದು ಥರ ಇರಬಹುದು.. ನೀವು ಸರಿಯಾಗಿ ಕಲೀತಿಲ್ಲ, ಸ್ನೇಹಿತರ ಜೊತೆ ಸೇರಿ ಹಾಳಾಗ್ತಿದ್ದೀರ ಅನ್ನುವ ಕಳವಳದಿಂದ ಹೊಡೆದಿರಬಹುದು.. ಅದನ್ನು ಅವರ ಸ್ಥಾನದಲ್ಲಿ ನಿಂತು ಯಾಕೆ ಯೋಚಿಸುವುದಿಲ್ಲ?'

ಸೂರ್ಯ ಅಪೂರ್ವಳ ಕಡೆಗೆ ತೀಕ್ಷ್ಣವಾಗಿ ನೋಡುತ್ತ, 'ನೀನು ನನ್ನ ನೋವು ಅರ್ಥ ಮಾಡ್ಕೋತೀಯ ಅಂತ ನಾನಿಲ್ಲಿಗೆ ಬಂದರೆ...ಅವರ ಸಾರಥ್ಯ ವಹಿಸಿಕೊಂಡು ಮಾತನಾಡ್ತಾ ಇದ್ಯಲ್ಲಾ' ಆಕ್ಷೇಪಿಸುವ ದನಿಯಲ್ಲಿಂದ.

'ನಾನು ಯಾರ ಪರ ವಹಿಸುತ್ತಿಲ್ಲ..ಅವ್ರೇನು ಅಂತ ನಾನು ಅವರನ್ನು ಹತ್ತಿರದಿಂದ ಕಂಡು ಬಲ್ಲೆ...ಅದಿಕ್ಕೇ ಅಂದೆ'

'ನನ್ನನ್ನು ನೀನಿನ್ನೂ ಅರ್ಥ ಮಾಡಿಕೊಂಡಿಲ್ವಾ ಅಪೂರ್ವ..?' ಅಪೂರ್ವಳ ಎರಡು ಕೈಗಳನ್ನು ಬಳಸಿ ಅವಳ ಕಣ್ಣಿನಾಳದೊಳಗೆ ಇಳಿಯುವಂತೆ ಆರ್ತ ದನಿಯಲ್ಲಿ ಕೇಳಿದ. ಅವನ ಹಿಡಿತದಿಂದ ಅವಳ ದೇಹ ಮಧುರವಾಗಿ ಕಂಪಿಸಿತು. ಅವನ ಕಣ್ಣಿನ ಆರ್ತತೆಗೆ ತಾನು ಕರಗಿ ಹೋಗುತ್ತಿರುವ ಭಾವ.

ತಾನೇಕೆ ಸೂರ್ಯನ ಬಗ್ಗೆ ಇಷ್ಟೊಂದು ಚಿಂತಿತನಾಗಿದ್ದೇನೆ? ಅವನು ನೋವಿನಲ್ಲಿ ಮಿಡುಕುತ್ತಿರುತ್ತಾನೆಂಬ ಭಾವನೆ ತನ್ನನ್ನು ಆತನ ಬಗ್ಗೆ ಆರ್ದ್ರಗೊಳಿಸಿದೆಯೇಕೆ? ಅವನ ಬಗ್ಗೆ ತನ್ನೆದೆಯಲ್ಲಿರುವುದು ಬರಿಯ ಅನುಕಂಪವೇ ಅಥವಾ ಅದಕ್ಕೂ ಮಿಗಿಲಾದ ಭಾವವರಳಿದೆಯೇ? ಆಗಲೇ ಅವಳ ಮನಸಲ್ಲಿ ಆದರ್ಶನ ಮುಖ ಮೂಡಿತ್ತು. ತಕ್ಕಡಿಯ ಎರಡು ತಟ್ಟೆಗಳಲ್ಲಿ ಒಂದರಲ್ಲಿ ಸೂರ್ಯನನ್ನೂ, ಮತ್ತೊಂದರಲ್ಲಿ ಆದರ್ಶನನ್ನೂ ಇಟ್ಟು ಅವಳ ಹೃದಯ ಯಾವ ಕಡೆ ವಾಲುತ್ತಿದೆ ಎಂದು ತೂಗಿ ನೋಡಿತ್ತು.

ಆದರ್ಶ ಗೌರವಸ್ಥ..ವೈದ್ಯ.. ರಾಯರಿಗೆ ಸಂಬಂಧಿ... ಆ ಆದರ ತನಗಿದೆ...ತನಗೆ ಹಲವು ಸಂದರ್ಭಗಳಲ್ಲಿ ನೆರವಾಗಿದ್ದಾನೆ...ಸ್ನೇಹಿತನೆಂಬ ಆತ್ಮೀಯತೆ ಇದೆ...ಆತನ ಮನದಲ್ಲಿ ತನ್ನ ಬಗ್ಗೆ ಇರುವ ಒಲವು ತಾನು ಗುರುತಿಸುತ್ತೇನಾದರೂ, ತನ್ನ ಹೃದಯಲ್ಲಿ ಎಂದೂ ಆತನ ಬಗ್ಗೆ ಪ್ರೀತಿಯ ಭಾವ ಮೂಡಿಲ್ಲ...ಸ್ನೇಹಿತನಿಗಿಂತ ಮಿಗಿಲಾಗಿ ತನಗೆಂದೂ ಆತನನ್ನು ಪರಿಗಣಿಸಲು ಸಾಧ್ಯ ಆಗಿರಲಿಲ್ಲ...ಡಾ.ಮುರಳಿಯ ಬಳಿ ಸೂರ್ಯನನ್ನು ಕರೆದೊಯ್ಯಲು ಸಹಕರಿಸಿದ್ದನಾದರೂ, ಅದು ಸೂರ್ಯನ ಮೇಲಿನ ಅಕ್ಕರಾಸ್ಥೆಗಾಗಲೀ, ಅನುಕಂಪಕ್ಕಾಗಲೀ ಅಲ್ಲ. ಬದಲಿಗೆ ತನ್ನ ದೃಷ್ಟಿಯಲ್ಲಿ ಮೆಚ್ಚುಗೆ ಗಳಿಸಲು ಎಂಬ ಸತ್ಯ ತನಗೆ ಅರಿವಿತ್ತು. ತನ್ನನ್ನು ಹೇಗಾದರೂ ಮೆಚ್ಚಿಸಬೇಕೆಂಬ ಪ್ರಯತ್ನ ಆದರ್ಶನದ್ದು.

ಇನ್ನು ಸೂರ್ಯ.. ಮೊದಲು ಮೂಡಿದ್ದು ಕೋಪ, ದ್ವೇಷ, ತಿರಸ್ಕಾರ ಹಂತ ಹಂತವಾಗಿ ಆತನ ಸಮೀಪ ಹೋದಂತೆಲ್ಲಾ ಆತನ ವಿವಶತೆಯನ್ನು ತಾನು ಅರ್ಥ ಮಾಡಿಕೊಂಡಿದ್ದೆ... ಹೆತ್ತವರಿದ್ದೂ ತನ್ನನ್ನು ಸ್ವೀಕಾರ ಮಾಡದೇ ಅವನಲ್ಲಿ ಮೂಡಿದ್ದ ನೋವು, ಹಗೆ ತಾನು ಅರ್ಥ ಮಾಡಿಕೊಂಡೆ.. ಅವನಿಗೆ ಅದು ಸಲ್ಲಬೇಕೆಂಬ ತನ್ನ ಪ್ರಯತ್ನದಲ್ಲಿ ಸಫಲಳಾಗಿದ್ದರಿಂದ, ಸೂರ್ಯ ದಿನಗಳೆದಂತೆ ತನ್ನಲ್ಲಿ ಹೆಚ್ಚು ಅವಲಂಬಿತನಾಗಿದ್ದ.. ನನ್ನ ಮೇಲೆ ಆದರ, ಅಭಿಮಾನ ಬೆಳೆಸಿಕೊಂಡಿದ್ದ... ಅವನ ನೋವು ತನ್ನೆದೆಯನ್ನು ಸೋಕಿದ್ದು ಸುಳ್ಳಲ್ಲ. ಆತನಿಗೆ ಸದಾ ನೆರವಾಗಬೇಕು. ಅವನು ನೋಯದಂತೆ ಅವನ ದುಗುಡ ಇಳಿಸಬೇಕು.. ಅವನು ಸದಾ ನಗುತ್ತ ಇರಬೇಕೆಂದು ತನ್ನ ಹೃದಯ ಬಯಸುತ್ತದೆ.. ಅದು ಈ ಮನೆಯ ಋಣ ತೀರಿಸುವ ಪ್ರಯತ್ನ ಮಾತ್ರವೇ?'

ಅಪೂರ್ವ ತನ್ನ ಅಂತರಂಗ ಬಗೆದು ನೋಡಿದ್ದಳು. ಅದಕ್ಕೂ ಮಿಗಿಲಾಗಿ ಭಾವ ಅವಳೆದೆಯಲ್ಲಿ ಕೊನರೊಡೆದಿತ್ತು. ಸೂರ್ಯನ ಆರ್ದ್ರತೆ ತನ್ನೆದೆಯನ್ನೂ ತೇವಗೊಳಿಸುತ್ತಿತ್ತು. ಅನಾಥೆಯಾಗಿ ಬೆಳೆದ ತಾನು ಸದಾ ಕೀಳರಿಮೆ, ಹೊಂದಾಣಿಕೆ ಜೊತೆಗೆ ಬಾಳಿದ ತನ್ನ ನೋವು, ಸೂರ್ಯನ ನೋವಿನೊಂದಿಗೆ ಸ್ಪಂದಿಸಿತ್ತು. ಅದೇ ಅವನ ಸಮೀಪಕ್ಕೆ ಮತ್ತೆ ಮತ್ತೆ ತನ್ನನ್ನು ಒಯ್ಯುತ್ತಿತ್ತು.

ತೀರಾ ಸಮೀಪದಲ್ಲಿತ್ತು ಸೂರ್ಯನ ಮುಖ. ಹಣೆಗೆ ಹಚ್ಚಿದ ಗಂಧ ಪ್ರಸಾದ ಅವನ ಮುಖಕ್ಕೆ ವಿಶಿಷ್ಟ ಶೋಭೆ ನೀಡಿತ್ತು. ಅವನಿಂದ ಬಲವಂತವಾಗಿ ಕಣ್ಣು ಕೀಳುತ್ತ ತನ್ನ ಕೈಗಳನ್ನು ಬಿಡಿಸಿಕೊಂಡು ಎದ್ದರೂ ಅವನು ಬಳಸಿದ ಸ್ಪರ್ಶದ ಬಿಸುಪು ಇನ್ನೂ ಅವಳ ಕೈಗಳಲ್ಲಿದ್ದಂತೆ ಭಾಸ!

**(ಸಶೇಷ)**